

(8ನೇ ಪುಟದಿಂದ)

ಅವರಿಗೆ ಬಿಡುವಿನ ಸಮಯದಲ್ಲಿ ಬೊಂಬೆ ರಚನೆಯ ಜೊತೆ ತೋಟಗಾರಿಕೆ, ಅಡುಗೆ, ರಂಗೋಲಿ.. ಹೀಗೆ ಎಲ್ಲದರಲ್ಲೂ ಆಸಕ್ತಿ.

ಸುಮಾರು 700 ಬೊಂಬೆಗಳು ಇವರ ಕೈಯಲ್ಲಿ ತಯಾರಾಗಿ ಕೂತಿವೆ. ಮಾರಾಟಕ್ಕಲ್ಲ, ದಸರೆಯಲ್ಲಿ ಮನೆಯಲ್ಲಿಡಲು. ಮಧ್ಯೆ ಭಾರತೀಯ ವಿದ್ಯಾಭವನ ದಲ್ಲೊಂದು ಪ್ರದರ್ಶನ. ವಸ್ತು ಭಾರತದ ವಿವಿಧ ರಾಜ್ಯಗಳ ಸಂಸ್ಕೃತಿ, ಸಂಪ್ರದಾಯ. ಅವುಗಳಿಗೆ ಅನುಸಾರವಾಗಿ ಬೊಂಬೆಗಳ ರಚನೆ. ಎತ್ತರ, ಮುಖಭಾವವೂ ಅಷ್ಟೇ ಮುಖ್ಯ. ಆಭರಣ, ಉಡುಪು ಎಲ್ಲದರಲ್ಲೂ ಪಕ್ಕಾ ದೇಸೀಯ. ಕೇರಳದ ಬೊಂಬೆಗೆ ಅಲ್ಲಿಯ ಸಾಂಪ್ರದಾಯಕ ಉಡುಗೆಯೇ ಆಗಬೇಕು, ಮಣಿಪುರ ಬೊಂಬೆಗೂ ಅಷ್ಟೇ. ಆದರೆ ವಿದೇಶಿ ಹೆಣ್ಣು ಬೊಂಬೆಗಳಿಗೆ ನವನವೀನ ಉಡುಗೆ.

ಸಂಪ್ರದಾಯಕ್ಕೆ ಅನುಗುಣವಾಗಿ ದೇವ– ದೇವತೆಯರ ಬೊಂಬೆಗಳಿವೆ. ನವದುರ್ಗಾ, ಕಾಳಿ, ರಾಧಾ–ಕೃಷ್ಣ, ಶ್ರೀರಾಮ ಪಟ್ಟಾಭಿಷೇಕ, ಲಕ್ಷ್ಮೀ–ನಾರಾಯಣ.. ಹೀಗೆ ಪಟ್ಟಿ ಬಹು ದೊಡ್ಡದು. 'ಶಾಸ್ತ್ರದ ಪ್ರಕಾರವೇ ಬೊಂಬೆ ಸಿದ್ಧಪಡಿಸುವುದು' ಎನ್ನುವ ವಿಜಯಾ ಈ ಹವ್ಯಾಸವನ್ನು ಕಳೆದ 10 ವರ್ಷಗಳಿಂದ ಪೋಷಿಸಿಕೊಂಡು ಬಂದಿದ್ದಾರೆ. ಇವುಗಳ ಜೋಡಣೆಗೂ ನಿಯಮಗಳಿವೆ. ಯಾವ್ಯಾವುದೋ ಬೊಂಬೆಗಳನ್ನು ಜೋಡಿ ಮಾಡುವಂತಿಲ್ಲ. ಎಲ್ಲೆಲ್ಲಿ ಯಾವುದನ್ನು ಇಡಬೇಕೋ, ಅದೇ ಸ್ಥಾನ ಕಾಯಂ. ಆಚೀಚೆ ಸ್ಥಾನ ಬದಲಿಸಿದರೆ ಕಲೆಯ ಸ್ವರೂಪವೇ ಕೆಟ್ಟು ಹೋಗುತ್ತದೆಂಬ ಎಚ್ಚರಿಕೆ.

ಇವುಗಳನ್ನೆಲ್ಲ ಕಾಯ್ದಿಡುವ ಬಗೆ ಹೇಗೆ? 'ಸರಳ. ಪ್ಲಾಸ್ಟಿಕ್ ಕವರ್‌ನಲ್ಲಿಟ್ಟು ಪೆಟ್ಟಿಗೆಯೊಳಗೆ ಇಟ್ಟರಾಯಿತು' ಎನ್ನುವ ವಿಜಯಾಗೆ ಬೆಂಗಳೂರಲ್ಲಿ ಶಾಶ್ವತ ಬೊಂಬೆ ವಸ್ತು ಸಂಗ್ರಹಾಲಯ ಆಗಬೇಕು ಎಂಬ ಬಯಕೆ.

ಬೊಂಬೆಗಳ ಜತೆ ಎನ್. ವಿಜಯಾ ಜೋಯಿಸ್

